**ಎಚ್ಚರ ಇರಲಿ**

**ಸಾಮಾನ್ಯವಾಗೇ ಆಯಾ ವಸ್ತುಗಳನ್ನು ಬಳಸುವಾಗ ಅವುಗಳಿಗೆ ಇರುವ ವಿಶೇಷವಾದ ಸ್ಪೆಸಿಫಿಕೇಷನ್- ಗುಣಧರ್ಮ ಆಧರಿಸಿ ಮನೆಯಲ್ಲಿ ಬಳಸುವುದು ಉತ್ತಮ. ಮಣ್ಣಿನಿಂದ ಮಾಡಿದ ಇಟ್ಟಿಗೆಯಂಥ ವಸ್ತುಗಳಿಗೆ ಕ್ಯೂರಿಂಗ್ ಬಹಳ ಮುಖ್ಯ. ಹಾಗೆಯೇ ತೆಳು ಗೋಡೆಗಳಿಗೆ ಅಂದರೆ ಆರು ಇಂಚಿಗಿಂತ ಕಡಿಮೆ ಇರುವ ಗೋಡೆಗಳಿಗೆ ಪ್ರತಿ ಎರಡು ಅಡಿಗೆ ಒಂದು ಪದರ ಎರಡು 8 ಎಮ್ ಎಮ್ ಕಂಬಿ ಸೇರಿಸಿ ಕಾಂಕ್ರಿಟ್ ಹಾಕುವುದನ್ನು ಮರೆಯಬಾರದು. 6 ಇಂಚಿನ ಬ್ಲಾಕ್ಸ್ ಬಳಸಿದರೆ, ಸಿಲ್ ಹಾಗೂ ಲಿಂಟಲ್ ಮಟ್ಟದಲ್ಲಿ ಕಂಟಿನ್ಯುಯಸ್ ಲಿಂಟಲ್- ಗೋಡೆಯುದ್ದಕ್ಕೂ ಲಿಂಟಲ್ ಹಾಕುವುದು ಉತ್ತಮ.**

■ ಆರ್ಕಿಟೆಕ್ಟ್ ಕೆ. ಜಯರಾಮ್

ಮನೆಯನ್ನು ಗಟ್ಟಿಮುಟ್ಟಾಗಿ ಕಟ್ಟಬೇಕು ಎಂದಾಕ್ಷಣ ಎಲ್ಲ ಗೋಡೆಗಳೂ ಭಾರವಾಗಿ, ದಪ್ಪನಾಗಿ ಇರಬೇಕು ಅಂತ ಅಂದಾಜು ಮಾಡುವುದು ತಪ್ಪಾಗುತ್ತದೆ. ದಪ್ಪನಾಗಿ ಇದ್ದಷ್ಟು ಮನೆ ಗಟ್ಟಿಮುಟ್ಟಾಗಿ ಇರುತ್ತದೆ ಅಂತ ನಂಬುವುದು ಬೇಡ. ಮನೆಯ ಒಳ ಗೋಡೆಗಳು ಹಾಗೂ ಮೊದಲ ಹಾಗೂ ಮೇಲು ಮಹಡಿಗಳ ಗೋಡೆಗಳು ಹಗುರವಾಗಿದ್ದರೂ ತೊಂದರೆ ಇರುವುದಿಲ್ಲ. ಮನೆಯೊಳಗಿನ ಗೋಡೆಗಳಿಗೆ ಕಳ್ಳಕಾಕರ ಭಯವಿರುವುದಿಲ್ಲ. ಹಾಗೆಯೇ ಎತ್ತರದ ಮಹಡಿಯಲ್ಲಿರುವ ಗೋಡೆಗಳಿಗೂ ಕೂಡ ಕನ್ನಹಾಕುವ ಸಾಧ್ಯತೆಗಳಿರುವುದು ಕಡಿಮೆ. ಹಾಗಾಗಿ ಎಲ್ಲೆಲ್ಲಿ ಅಷ್ಟೊಂದು ದಪ್ಪನೆಯ ಹಾಗೂ ಭಾರದ ಗೋಡೆಗಳ ಅಗತ್ಯವಿರುವುದಿಲ್ಲವೋ ಅಲ್ಲೆಲ್ಲ ಹಗುರ ಗೋಡೆಗಳನ್ನು ಬಳಸಬಹುದು. ಕೆಳ ಅಂತಸ್ತುಗಳಲ್ಲಿ ಗೋಡೆ ದಪ್ಪಾದಾಗಿದ್ದರೆ ತೊಂದರೆ ಇಲ್ಲ. ಆದರೆ ಮೇಲಂತಸ್ತುಗಳಲ್ಲಿ ಗೋಡೆಗಳು ಹಗುರವಾಗಿದ್ದಷ್ಟು ಒಳಿತು.



### ಲೈಟ್‌ವೇಟ್ ಗೋಡೆಗಳ ಲೆಕ್ಕಾಚಾರ

ಸಾಮಾನ್ಯವಾಗಿ ಒಂದು ಇಟ್ಟಿಗೆ ಐದಾರು ಕೆ.ಜಿ ಭಾರವಿರುತ್ತದೆ. ಒಂದು ಘನ ಅಡಿ ಇಟ್ಟಿಗೆ ಗೋಡೆ ಏನಿಲ್ಲವೆಂದರೂ 60 ಕೆಜಿ ತೂಗುತ್ತದೆ. ಅದೆ ಹಗುರ ಸಾಮಗ್ರಿಗಳಿಂದ ಕಟ್ಟಿದ ಗೋಡೆಗಳು ಅರ್ಧಕ್ಕರ್ಧ ಮಾತ್ರ ಭಾರವಿರುತ್ತದೆ. ಹಾಗಾಗಿ ನಾವು ನಮ್ಮ ಕಟ್ಟಡದ ಒಟ್ಟಾರೆ ಭಾರವನ್ನು ಸಾಕಷ್ಟು ಕಡಿಮೆ ಮಾಡಿಕೊಳ್ಳುವುದರ ಮೂಲಕ ನಮ್ಮ ಪಾಯದ ಮೇಲೆ ಬರುವ ಅನಗತ್ಯ ಹೊರೆಯನ್ನು ಇಳಿಸಿಕೊಳ್ಳಬಹುದು.

ಕೆಲವೊಮ್ಮೆ ನಮಗೆ ನಮ್ಮ ಸೂರು ಭಾರವಾದ ಪಾರ್ಟಿಷನ್ ಗೋಡೆಗಳನ್ನು ಹೊರಬಹುದೇ? ಎಂಬ ಸಂಶಯವಿರುತ್ತದೆ. ಹಾಗೇನಾದರೂ ಕಟ್ಟಿದರೂ ನಂತರ ಈ ಇಟ್ಟಿಗೆ ಗೋಡೆಗಳಲ್ಲಿ ಸಣ್ಣದೊಂದು ಬಿರುಕು ಬಿಟ್ಟರೂ ತಲೆನೋವು ಶುರುವಾಗುತ್ತದೆ. ಹಾಗಾಗಿ ನಮಗೆ ಸಂಶಯವಿದ್ದಾಗ, ನಮ್ಮ ಸೂರಿನ ಮೇಲೆ ಅನಗತ್ಯವಾಗಿ ಹೆಚ್ಚುವರಿ ಹೊರೆ ಹೊರಸದೆ ಲೈಟ್‌ವೇಟ್ ಗೋಡೆಗಳನ್ನು ಕಟ್ಟುವುದು ಒಳ್ಳೆಯದು.



# ಹಗುರ ಗೋಡೆಗಳು

## ದಪ್ಪಪುಷ್ಟ ಗೋಡೆಗಳಿಗಿಂತ ಇವು ಮನೆಗೂ ಹಗುರ, ಜೇಬಿಗೂ ಹಗುರ

### ಹಗುರ ವಸ್ತುಗಳು

ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿರುವ ಲೈಟ್‌ವೇಟ್ ವಸ್ತು ಎಂದರೆ ಅದು 'ಏರೇಟೆಡ್' ಕಾಂಕ್ರಿಟ್ ಬ್ಲಾಕ್ಸ್. ಇವು ನೋಡಲು ಸಾಮಾನ್ಯ ಕಾಂಕ್ರಿಟ್ ಬ್ಲಾಕ್‌ಗಳಂತೆಯೇ ಇದ್ದರೂ ಇವುಗಳ ಭಾರ ಅರ್ಧಕ್ಕೆಅರ್ಧ ಇರುತ್ತದೆ. ಇವನ್ನು ವಿಶೇಷ ರೀತಿಯಲ್ಲಿ ಗಾಳಿಯ ಸಣ್ಣಸಣ್ಣ ಗೋಲಗಳನ್ನು ಒಳಗೊಂಡಂತೆ ತಯಾರುಮಾಡಲಾಗುತ್ತದೆ. ಆರ್‌ಸಿಸಿ ಯಿಂದ ಮಾಡಿದ ಹಡಗೂ ಕೂಡ ನೀರಿನಲ್ಲಿ ತೇಲುವ ಸಾಮರ್ಥ್ಯ ಹೊಂದಿರುವಂತೆ ಈ ಲೈಟ್ ವೇಟ್ ಕಾಂಕ್ರಿಟ್ ಬ್ಲಾಕ್ಸ್‌ಗಳಲ್ಲಿ ಕೆಲವು ಮಾದರಿಯವು ನೀರಿನಲ್ಲಿ ತೇಲುವಷ್ಟು ಹಗುರವಾಗಿರುತ್ತದೆ.

ನೀರು ಒಂದು ಘನ ಅಡಿಗೆ ಸುಮಾರು 27 ಕೆ.ಜಿ ತೂಗಿದರೆ, ಈ ಹಗುರ ದಿಮ್ಮಿಗಳು 25 ಕೆಜಿ ಮಾತ್ರ ಇರುತ್ತವೆ!

ಇನ್ನೊಂದು ಸಾಂಪ್ರದಾಯಿಕ ಅನ್ನುವಷ್ಟು ಹಳೆಯದಾದ ವಸ್ತು – ಹಾಲೊ ಕ್ಲೇ ಬ್ಲಾಕ್ಸ್. ಕೋಷಗಳನ್ನು ಹೊಂದಿರುವ ಈ ಜೇಡಿಮಣ್ಣಿನ ಬ್ಲಾಕ್‌ಗಳೂ ಕೂಡ ಸಾಕಷ್ಟು ಹಗುರವಾಗಿದ್ದು, ಇವನ್ನು ಕಟ್ಟುವಾಗ ಸಿಮೆಂಟ್ ಗಾರೆ ಕೋಷಗಳಲ್ಲಿ ತುಂಬಿಕೊಳ್ಳದಂತೆ ಮುತುವರ್ಜಿ ವಹಿಸಿದರೆ ಗೋಡೆಯ ಭಾರ ಸರಾಸರಿ ಶೇ. 30ರಷ್ಟು ಉಳಿಸಬಹುದು.


ಮಾಮೂಲಿ ಇಟ್ಟಿಗೆಗಳನ್ನು 'ಗೋಡಿ'ಯಲ್ಲಿ ಅಂದರೆ ಸಾಮಾನ್ಯವಾಗಿ ನಾಲ್ಕೂವರೆ ಇಂಚು ಕೆಳಗೆ ಬರುವಂತೆ ಇಡುವ ಬದಲು ಮೂರು ಇಂಚಿನ ಮುಖ ಕೇಳಬರುವಂತೆ ನಾಟು-ಪಾಟು ರೀತಿಯಲ್ಲಿ ಕಟ್ಟಿ ನೋಡಿ. ಇದರಿಂದ ಸಾಕಷ್ಟು ಇಟ್ಟಿಗೆ ಉಳಿಯುವುದರ ಜೊತೆಗೆ ಭಾರವೂ ಕಡಿಮೆಯಾಗುತ್ತದೆ. ಈ ರೀತಿಯಾಗಿ ಇಟ್ಟಿಗೆ ಇಡುವುದನ್ನು 'ರ್‍ಯಾಟ್ ಟ್ರ್ಯಾಪ್' ಬಾಂಡ್ ಎಂದು ಕರೆಯಲಾಗುತ್ತದೆ.

### ಹೊರಗೋಡೆಗಳಿಗೆ ಲೈಟ್‌ವೇಟ್ ಬ್ಲಾಕ್ಸ್

ಗೋಡೆ ಕಟ್ಟುವಾಗಲೇ ನೀರುನಿರೋಧಕ ದ್ರಾವಣಗಳನ್ನು ಬಳಸಿ ಕಟ್ಟಬಹುದು. ಇಲ್ಲವೇ ನಂತರ ಜಾಯಿಂಟ್‌ಗಳನ್ನು ನೀರು ನಿರೋಧಕ ದ್ರಾವಣ ಬೆರೆಸಿದ 1: 4 ಸಿಮೆಂಟ್ ಮಿಶ್ರಣದಿಂದ ಪಾಯಿಂಟ್ ಮಾಡುವುದರ ಮೂಲಕವೂ ಸಾಕಷ್ಟು ನೀರುನಿರೋಧಕ ಗುಣವನ್ನು ಪಡೆಯಬಹುದು.

ಒಂದು ಪದರ 'ಕಪ್ಪಿ ಫಿನಿಷ್' ಅಂದರೆ ಮರಳು ಜರಡಿ ಹಿಡಿದಾಗ ಬರುವ ಸಣ್ಣಸಣ್ಣ ನುರುಜು ಕಲ್ಲುಗಳನ್ನು, ಮತ್ತೊಮ್ಮೆ ದೊಡ್ಡ ಜರಡಿಯಲ್ಲಿ ಹಾಕಿ ತೀರ ದೊಡ್ಡ ಕಲ್ಲುಗಳನ್ನು ತೆಗೆದು, ಸಿಮೆಂಟಿನೊಂದಿಗೆ ಬೆರೆಸಿ ಗೋಡೆಗೆ ಹಾಕುವ ಮೂಲಕವೂ ಕೂಡ ಸಾಕಷ್ಟು ನೀರುನಿರೋಧಕ ಗುಣವನ್ನು ನೀಡಬಹುದು.

ಈಗೆಲ್ಲ ಟೆಕ್ಸಚರ್ ಪೇಂಟ್ಸ್- ತರಹೇವಾರಿ ಮೇಲ್ಮೈ ನೀಡುವ ಬಣ್ಣಗಳು ಲಭ್ಯ. ಇವು ಗೋಡೆಗಳ ಅಂದವನ್ನು ಹೆಚ್ಚಿಸುವುದರ ಜೊತೆಗೆ ವಾಟರ್ ಪ್ರೂಫಿಂಗ್ ಕಾರ್ಯವನ್ನೂ ಕೂಡ ಮಾಡುತ್ತದೆ.



### ಉಷ್ಣ ಹಾಗೂ ಶೀತನಿರೋಧಕ

**ಸಾಮಾನ್ಯವಾಗೇ ಹಗುರ ದಿಮ್ಮಿಗಳು ಇನ್ಸುಲೇಷನ್ ಗುಣವನ್ನು ಪಡೆದಿರುತ್ತದೆ. ಹೀಗೆ ಉಷ್ಣ ನಿರೋದಕ ಗುಣಗಳನ್ನು ಹೊಂದಿರಲು ಮುಖ್ಯಕಾರಣ- ಅವುಗಳು ಒಳಗೊಂಡಿರುವ ಗಾಳಿಯ ಅಂಶವೇ ಆಗಿರುತ್ತದೆ. ಹಾಗೆಯೇ ಈ ಲೈಟ್‌ವೇಟ್ ಬ್ಲಾಕ್ಸ್‌ಗಳು ಒಳ್ಳೆಯ ಶಬ್ಧನಿರೋಧಕ ಗುಣಗಳನ್ನೂ ಕೂಡ ಒಳಗೊಂಡಿರುತ್ತದೆ.**

### ಲೈಟ್‌ವೇಟ್ ಕನ್‌ಸ್ಟ್ರಕ್ಷನ್

ಹಗುರ ಕಾಂಕ್ರಿಟ್ ಬ್ಲಾಕ್‌ಗಳನ್ನು ಸಾಮಾನ್ಯ ದಿಮ್ಮಿಗಳನ್ನು ಕಟ್ಟುವರೀತಿಯಲ್ಲೇ 1:6 ಮಿಕ್ಸ್ ಅಂದರೆ ಒಂದು ಭಾಗ ಸೀಮೆಂಟಿಗೆ ಆರು ಭಾಗ ಮರಳನ್ನು ಬೆರೆಸಿ ಕಟ್ಟಬಹುದು. ಹಗುರ ಮರಳಿನ ಕಣಗಳಂಥವು ಸಿಗುವುದಾದರೂ ಈ ಬ್ಲಾಕ್‌ಗಳ ಮಧ್ಯದ ಜಾಯಿಂಟ್ ತೆಳ್ಳಗಿರುವುದರಿಂದ ಮಾಮೂಲಿ ಮರಳು ಬಳಸಿ ಕಟ್ಟಿದರೂ ಭಾರವೇನೂ ಅಷ್ಟೊಂದು ಹೆಚ್ಚಾಗುವುದಿಲ್ಲ.

ಗಾಳಿಯ ಕೋಶಗಳನ್ನು ಒಳಗೊಂಡ 'ಏರೇಟೆಡ್' ಕಾಂಕ್ರಿಟ್ ಬ್ಲಾಕ್ಸ್' ವಿವಿಧ ಗಾತ್ರದಲ್ಲಿ ದೊರೆಯುತ್ತದೆ. ಮನೆಯ ಒಳಗಿನ ಪಾರ್ಟಿಷನ್ ಗೋಡೆಗಳಿಗೆ ನಾಲ್ಕು ಇಲ್ಲವೇ ಆರುಇಂಚು ದಪ್ಪದ ದಿಮ್ಮಿಗಳನ್ನು ಬಳಸಬಹುದು. ಹೊರಗಿನ ಗೋಡೆಗಳಿಗೆ ಆರು ಇಂಚಿನ ಬ್ಲಾಕ್‌ಗಳು ಸಾಮಾನ್ಯವಾಗಿ ಸಾಕಾಗುತ್ತದೆ. ಈ ದಿಮ್ಮಿಗಳು ನೀರುನಿರೋಧಕ ಗುಣಗಳನ್ನು ಹೊಂದಿದ್ದರೂ ಅವುಗಳ ಮಧ್ಯೆ ಬರುವ ಜಾಯಿಂಟ್‌ಗಳು ನೀರನ್ನು ಒಳಗೆ ಬಿಡುವ ಸಾಧ್ಯತೆಯಿರುವುದರಿಂದ ಸೂಕ್ತ ಮುಂಜಾಗರೂಕತೆವಹಿಸುವುದು ಸೂಕ್ತ.

■ ಹೆಚ್ಚಿನ ಮಾಹಿತಿಗೆ: 9844132826

# ಹಣ ಹೂಡಲು ಸಕಾಲ



ಪುಟ 1

2024 ರ ಹೊತ್ತಿಗೆ ನಮ್ಮ ಸೂಚ್ಯಂಕ ಗಣನೀಯ ಏರಿಕೆ ಕಾಣುವುದರಲ್ಲಿ ಅನುಮಾನವೇ ಇಲ್ಲ. ನಮ್ಮ ಅಭಿವೃದ್ಧಿ ದರ ಶೇ. 9 ರಿಂದ ಪ್ರಸಕ್ತ ಇರುವ ಶೇ.5ರವರೆಗೆ ಇಳಿಕೆಯಾಗಿರುವುದು ನಮಗೆಲ್ಲಾ ಗೊತ್ತಿರುವ ಸಂಗತಿಯೇ. ಇದರ ಕಾರಣಗಳ ಬಗ್ಗೆ ಸಾಕಷ್ಟು ಬಾರಿ ಚರ್ಚೆಗಳಾಗಿವೆ. ನಮ್ಮ ರಾಷ್ಟ್ರದ ಜನರ ಮಹತ್ವಾಕಾಂಕ್ಷೆ ಮತ್ತು ಸಾಮರ್ಥ್ಯವನ್ನು ಅವಲೋಕಿಸಿದಾಗ ನಮ್ಮ ದೇಶ ಈಗಲೂ ಕೂಡಾ ಶೇ. 7ಕ್ಕಿಂತ ಜಾಸ್ತಿ ಅಭಿವೃದ್ಧಿಯನ್ನು ಹೊಂದಬಹುದು. ಒಂದು ವೇಳೆ ನಾವು ಶೇ.7 ರಷ್ಟು ಅಭಿವೃದ್ಧಿಯತೆ ಪ್ರತೀ ವರ್ಷ ಮುಂದುವರಿದರೆ, 2024ರ ಬದಲು 2027 ರ ಹೊತ್ತಿಗೆ ನಮ್ಮ ಜಿಡಿಪಿ ಐದು ಟ್ರಿಲಿಯನ್ ಡಾಲರ್ ತಲುಪುವುದು ನಿಸ್ಸಂದೇಹ.

ನಾನು ಮೂರು ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇನೆ;

1. **ಉತ್ತಮ ಸನ್ನಿವೇಶ**
2. **ಕೆಟ್ಟ ಸನ್ನಿವೇಶ**
3. **ನೈಜ ಸನ್ನಿವೇಶ**

ಈ ಮೇಲ್ಕಂಡ ಸನ್ನಿವೇಶಗಳನ್ನು ಹಾಗೂ ಈ ವರ್ಷದ GDP ದರ ಶೇ. 4. 5ರಿಂದ ಆರಂಭಿಸಿ ಶೇ.7 – ಅನ್ನು ಉದಾಹರಣೆಯಾಗಿ ತೆಗೆದುಕೊಂಡು ಸಂಬಂಧಿಸಿದ GDP ಅನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಮೂರೂ ಉದಾಹರಣೆಗಳಲ್ಲಿ Sensex level ಎಷ್ಟಿರಬಹುದು ಎಂದು ಈ ಕೆಳಕಂಡ ಅಂಕಿ – ಅಂಶ ನಿಮಗೆ ವಿವರಣೆಯನ್ನು ನೀಡುತ್ತದೆ.

ನಮ್ಮ ಸೂಚ್ಯಂಕ 80000 ಅನ್ನು ದಾಟುವಲ್ಲಿ ನಿಮಗೆ ಸಂಶಯ ಇದೆಯಾ? ನನಗಂತೂ ಖಂಡಿತಾ ಇಲ್ಲ. ದೂರದೃಷ್ಟಿಯನ್ನು ಇಟ್ಟುಕೊಂಡು ಮಾರುಕಟ್ಟೆಯ ಏರಿಳಿತಗಳನ್ನು ನಾವು ಗಮನಿಸಿದರೆ ಮೇಲ್ಕಂಡ ಸನ್ನಿವೇಶ ಅಸಾಧ್ಯವಂತೂ ಅಲ್ಲವೇ ಅಲ್ಲ. ಇಂದು ನಾನು ಷೇರುಗಳನ್ನು ಖರೀದಿಸುತ್ತೇನೆ.... ನಾಳೆ ಮಾರುತ್ತೇನೆ... ನಾನು ಅದರಿಂದ ಲಾಭವನ್ನು ಗಳಿಸಿರಬಹುದು.... ಅದು ಶಾರ್ಟ್‌ಟರ್ಮ್. ಕಳೆದ ಕೆಲವು ವರ್ಷಗಳಿಂದ ಮಾರುಕಟ್ಟೆ ತನ್ನದೇ ಆದ ಕೆಲವು ಕಾರಣಗಳಿಂದ ನಷ್ಟವನ್ನು ಕಂಡಿದೆ. ಆದರೆ, ನಾನಂತೂ ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿ ಚೆನ್ನಾಗಿ ಸಂಪಾದಿಸಿಕೊಂಡಿದ್ದೇನೆ.

ಹಣ ಹೂಡಲು ಇದು ಸರಿಯಾದ ಸಮಯ.... ಹಣ ಹೂಡಿ..... ■

# ಮನೆಯ ವಾಸ್ತು ಶುದ್ಧಿಗೆ ಗಣಪತಿ ಆರಾಧನೆ ಮಾಡಿ

**ವಾಸ್ತು**

ಅನಂತಶಾಸ್ತ್ರಿ

ತೆಂಗಿನ ಗರಿಗಳ ಪೂರಕವಾದ ಗಣೇಶನನ್ನು ಆರಾಧಿಸಬೇಕು. ಹಸಿರು ಮಯವಾದ ತೆಂಗಿನ ಗರಿಯ ಪ್ರಾಕೃತ ಗಣೇಶ ನಿಮ್ಮ ಮನೆಯ ನಕಾರಾತ್ಮಕ ವಾಸ್ತು ವಲಯಗಳನ್ನು ಕರಗಿಸಿ ಸಕಾರಾತ್ಮಕ ಸ್ಪಂದನಗಳಿಗೆ ಕಾರಣನಾಗುತ್ತಾನೆ.

ಮಂಗಳಕಾರಕನಾದ ಗಣಪತಿಯು ಬದುಕಿನ ಸಂಪನ್ನತೆಗಳಿಗೆ, ಗೆಲುವಿಗೆ, ಅನಿಷ್ಟ ನಿವಾರಣೆಗಳಿಗೆ ಕಾರಣನಾಗಿದ್ದಾನೆ. ಮಂಗಳಮಯನಾದ ಗಣಪತಿಗೆ ನಿಮ್ಮ ಮನೆಗಳಲ್ಲಿನ ವಾಸ್ತು ದೋಷಗಳನ್ನು ನಿವಾರಿಸುವ ಶಕ್ತಿ ಇದೆ. ವಾಸ್ತು ಪುರುಷನಾದ ಶ್ರೀಹರಿಯ ಶ್ವೇತ ವಸ್ತ್ರಧಾರಿಯಾದ, ಚತುರ್ಭುಜನಾದ ಗಣಪತಿಯಾಗಿದ್ದಾನೆ. ಶಶಿ ಅಂದರೆ ತಿಂಗಳನಾದ ಚಂದ್ರನ ಕೆನೆ ಬಣ್ಣವು ಗಣಪತಿಯ ಬಣ್ಣವೂ ಆಗಿದೆ. ರುದ್ರ ಸ್ವರೂಪಿಯಾದಾಗ ಗಣಪನು ಕುಂಕುಮದ ಕೆಂಪಲ್ಲಿ, ರಕ್ತ ಚಂದನದ ಹೊಳಪಲ್ಲಿ ಮೆರಗು ಪಡೆಯುತ್ತಾನೆ. ಗಣೇಶನೇ ವಾಸ್ತವದಲ್ಲಿ ವಾಸ್ತು ಪುರುಷನಾಗಿದ್ದಾನೆ.

ಮನೆಯಲ್ಲಿ ಗಣೇಶ ಚತುರ್ಥಿಯ ದಿನ ಒಂದು ಮೇಲ್ಮಟ್ಟದಲ್ಲಿ ಅಡ್ಡವಾಗಿರಿಸಿದ ತೆಂಗಿನ ಒಂಟಿ ಗರಿಗೆ, ಉದ್ದನೆಯ ಇನ್ನೊಂದು ಒಂಟಿಗರಿಯನ್ನು ಮಧ್ಯಭಾಗದಲ್ಲಿ ಅಂಟಿಸಿ ಸರಳವಾಗಿ ಈ ಗರಿಗಳನ್ನೇ ಗಣಪತಿಯನ್ನಾಗಿಸಿ ಆರಾಧಿಸಿದರೆ ಮನೆಯ ವಾಸ್ತು ದೋಷಗಳಿಗೆ ಪರಿಹಾರ ಎಂಬುದನ್ನು ವಾಸ್ತು ತಜ್ಞನಾದ ಯಮನು ಸಾರಿದ್ದಾನೆ. ಆರಾಧನೆ ಎಂದರೆ ಧೂಪ, ದೀಪ, ಮಂಗಳಾರತಿ, ನೈವೇದ್ಯಗಳ ಅವಶ್ಯಕತೆ ಇರಬೇಕಾಗಿಲ್ಲ. ಗಣಪತಿಯನ್ನು ತೆಂಗಿನ ಗರಿಗಳಲ್ಲಿ ಒಡಮೂಡಿಸಿದ ಆಕೃತಿಯಲ್ಲಿ ಕಲ್ಪಿಸಿಕೊಂಡು ಗಕಾರಪೂರ್ವಕವಾದ ಗಣಪತಿ ಸಹಸ್ರನಾಮಾವಳಿಯನ್ನು ಓದಿ, ನಮಸ್ಕರಿಸಿ. ನಂತರ ಪ್ರತಿ ದಿನವೂ ಗಕಾರ ಪೂರ್ವಕ ಅಷ್ಟೋತ್ತರ ನಾಮಾವಳಿಯನ್ನು ಪೂರ್ವಕ್ಕೆ ಮುಖ ಹಾಕಿ ಓದಬೇಕು. ಇದನ್ನು ಪ್ರತಿ ದಿನವೂ ಮುಂದುವರಿಸಿ. ಪ್ರತಿ ಪಕ್ಷದ (ಶುಕ್ಲ ಪಕ್ಷ, ಕೃಷ್ಣ ಪಕ್ಷ) ಚತುರ್ಥಿಯ ದಿನ ಗಕಾರ ಪೂರ್ವಕ ಗಣಪತಿ ಸಹಸ್ರ ನಾಮಾವಳಿ ಪಠಿಸಿ. ತೆಂಗಿನ ಗರಿಗಳ ಪೂರಕವಾದ ಗಣೇಶನನ್ನು ಆರಾಧಿಸಬೇಕು. ಹಸಿರು ಮಯವಾದ ತೆಂಗಿನ ಗರಿಯ ಪ್ರಾಕೃತ ಗಣೇಶ ನಿಮ್ಮ ಮನೆಯ ನಕಾರಾತ್ಮಕ ವಾಸ್ತು ವಲಯಗಳನ್ನು ಕರಗಿಸಿ ಸಕಾರಾತ್ಮಕ ಸ್ಪಂದನಗಳಿಗೆ ಕಾರಣನಾಗುತ್ತಾನೆ. ಒಂದು ಪುಟ್ಟ ಶಂಖದಲ್ಲಿ ಗೋವಿನ ಕ್ಷೀರ ಸಂಗ್ರಹಿಸಿ ಮನೆಯ ಅಂಗಳದ ನಡು ಮಧ್ಯ, ಹೊರ ಬಾಗಿಲಿನ ಎದುರು ಒಂದು ಬೆಳ್ಳಿ ನಾಣ್ಯದ ಮೇಲೆ ನಾಲ್ಕೈದು ಹನಿ ಹಾಲನ್ನು ಬಿಂದು ರೂಪಗಳಲ್ಲಿ ಸೋಕಿಸಬೇಕು. ಮುಖ್ಯವಾಗಿ ಇದನ್ನು ಹುಣ್ಣಿಮೆಯ ದಿನ ರಾತ್ರಿ ಹೊತ್ತು ಸ್ನಾನಾನಂತರ ನೆರವೇರಿಸಬೇಕು. ಹಾಲು ಸೋಕಿದ ನಾಣ್ಯವನ್ನು ಚೆನ್ನಾಗಿ ನೀರಿನಲ್ಲಿ ತೊಳೆದು ಕೊನೆಯ ನೀರ ಹನಿಗಳನ್ನು ತೀರ್ಥರೂಪದಲ್ಲಿ ಸೇವಿಸಿ. ಈ ಸೇವನೆಯ ನಂತರದ ಗಕಾರ ಪೂರ್ವಕ ಗಣಪತಿ ಅಷ್ಟೋತ್ತರ ಅಥವಾ ಸಹಸ್ರನಾಮಾವಳಿ ಕೂಡ ಮನೆಯ ವಾಸ್ತು ದೋಷಗಳನ್ನ, ವಿಶೇಷವಾಗಿ ದಕ್ಷಿಣ, ಆಗ್ನೇಯ, ನೈಋತ್ಯ ದಿಕ್ಕಿನ ದೋಷಗಳನ್ನು ನಿವಾರಿಸುತ್ತದೆ.

ಹಾಗೆಯೇ ಗೋವು ಭಾರತೀಯ ಸಂಸ್ಕೃ ತಿಯಲ್ಲಿ ವಿಶೇಷ ಸ್ಥಾನವನ್ನು ಪಡೆದಿದೆ. ಗೋವನ್ನು ಭಾರತೀಯರು ತಾಯಿಯ ಸ್ವರೂಪದಲ್ಲಿ ಗುರುತಿಸುತ್ತಾರೆ. ಈ ನಿಟ್ಟಿನಲ್ಲಿ ಭಾರತೀಯರ ವಾಸ್ತು ಶಾಸ್ತ್ರ ಕಲ್ಪನೆಯು ಮನೆಯ ಭದ್ರತೆಯನ್ನು ಆರೋಗ್ಯದ ನೆಲೆಯಲ್ಲಿ ಗಟ್ಟಿಗೊಳಿಸುವುದಕ್ಕೆ ಪೂರಕವಾಗಿ ಹಸುವಿನ ಸಗಣಿ ಹಾಗೂ ಮೂತ್ರದ ಅಂಶಗಳನ್ನು ಇರಬಹುದಾದ ಕ್ರಿಮಿ ಕೀಟಗಳನ್ನು ಕೊಲ್ಲುವ ಶಕ್ತಿಯನ್ನು ಆಧುನಿಕ ವಿಜ್ಞಾನವು ದೃಢಪಡಿಸಿದೆ.

ಈ ಎಲ್ಲ ಸಂಗತಿಗಳನ್ನು ಗಮನಿಸಿದರೆ ನಮ್ಮ ಸಂಪ್ರದಾಯ ಬೆಳ್ಳಂಬೆಳಗಿನ ಹೊತ್ತು ಗೋವಿನ ಮೂತ್ರ ಮತ್ತು ಸಗಣಿಯ ಒಂದು ಚಿಕ್ಕ ಭಾಗವನ್ನು ನೀರಿನಲ್ಲಿ ಮಿಶ್ರಣಗೊಳಿಸಿ ಮನೆಯ ಎಲ್ಲೆಡೆ ಸೂಕ್ಷ್ಮವಾಗಿ ಸಿಂಪಡಿಸುವ ಕೆಲಸವನ್ನು ನಡೆಸಿಕೊಂಡು ಬರುವುದು ವಾಡಿಕೆಯಾಗಿತ್ತು. ಈಗ ಈ ಸಂಪ್ರದಾಯ ಭಾರತದಲ್ಲಿ ಎಲ್ಲಿಯೂ ಕಾಣಸಿಗದು. ದೇಹದ ಸೌಖ್ಯಕ್ಕಾಗಿಯೂ ಗೋಮೂತ್ರವನ್ನು ಪ್ರತಿ ಶುಭಕಾರ್ಯದ ಪೂರ್ವದಲ್ಲಿ ಅಂತರ್ ಶುದ್ಧಿಗಾಗಿ ಸ್ವಲ್ಪ ಮಟ್ಟಿಗೆ ಕುಡಿಸುವುದು ಧಾರ್ಮಿಕ ಕಾರ್ಯಕ್ರಮಗಳ ಪೂರ್ವ ವಿಧಿಯಾಗಿ ನಡೆಯುತ್ತಿತ್ತು. ಏನೇ ಇರಲಿ ಮನೆಯಲ್ಲಿ ವಾಸ್ತು ಸಂಬಂಧೀ ಏರುಪೇರುಗಳಿಂದ ಸ್ವಚ್ಛತೆಯ ವಿಚಾರದಲ್ಲಿನ ಅಸಮತೋಲನ ನಿವಾರಣೆಗೆ ಪ್ರತಿ ದಿನ ಗೋಮಯ, ಮೂತ್ರ ಸಿಂಪಡಣೆ ಒಂದು ಉತ್ತಮವಾದ ಶುದ್ಧೀಕರಣಕ್ಕೆ ಅನುಕೂಲಕರವಾಗಿದೆ ಎಂಬುದನ್ನು ನಮ್ಮ ಭಾರತೀಯ ವಾಸ್ತು ಶಾಸ್ತ್ರ ದೃಢಪಡಿಸಿದೆ.

ಒಟ್ಟಿನಲ್ಲಿ ಜನರಿಗೇ ಇದು ಸಂಬಂಧಿಸಿದ ವಿಚಾರ. ಈ ನೆಲೆಯಲ್ಲಿ ಹಸಿರು ಎಲೆ ಗಣಪನನ್ನು ಪೂಜಿಸುವ, ಹಸುವಿನ ಸಂಬಂಧೀ ಘಟಕಗಳ ಮೂಲಕ ಶುದ್ಧ ಕ್ರಿಯೆ ನಡೆಸಿ, ಆರೋಗ್ಯ ಪೂರ್ಣ ಚೈತನ್ಯಕ್ಕೆ ಧಾತುಗಳನ್ನು ಮನೆಯಲ್ಲಿ ಹರಳುಗಟ್ಟಿಸುವ ಅಂಶಗಳನ್ನು ಹೊಸದೇ ಗ್ರಹಿಕೆಯೊಂದಿಗೆ ವಿಶ್ಲೇಷಿಸಬಹುದಾಗಿದೆ.

■ ಮೊ: 8147824707